# ಧರಣಿ ಮಂಡಲದೊಳಗೆ ಬೋಲ್ಡ್ ಹುಡುಗಿ!

ಇದುವರೆಗೆ ಮುಗ್ಧ ಹುಡುಗಿಯ ಪಾತ್ರಗಳಲ್ಲಿಯೇ ಕಾಣಿಸಿಕೊಂಡಿದ್ದ **ಐಶಾನಿ ಶೆಟ್ಟಿ**, ಈಗ ಬೋಲ್ಡ್ ಹುಡುಗಿಯಾಗಿ ತೆರೆಯ ಮೇಲೆ ಕಾಣಿಸಿಕೊಳ್ಳಲು ಸಜ್ಜಾಗಿದ್ದಾರೆ.

■ ಪದ್ಮನಾಭ ಭಟ್



ಐಶಾನಿ ಎಂದರೆ ಮುದ್ದು ಮತ್ತು ಮುಗ್ಧತೆ ಎರಡೂ ಬೆರೆತಿರುವ ಚಿತ್ರವೇ ಕಣ್ಣಮುಂದೆ ಬರುತ್ತದೆ. ಅದಕ್ಕೆ ಪೂರಕವಾಗಿ ಅವರು ಇದುವರೆಗೆ ನಟಿಸಿರುವ ಪಾತ್ರಗಳಲ್ಲಿಯೂ ಅದೇ ರೀತಿ ಕಾಣಿಸಿಕೊಂಡಿದ್ದಾರೆ. ಆದರೆ ಇದುವರೆಗಿನ ಆ ಇಮೇಜ್ ಅನ್ನು ಕುಟ್ಟಿ ಪುಡಿಮಾಡುವ ರೀತಿಯ ಪಾತ್ರವೊಂದರ ಮೂಲಕ ತೆರೆಯ ಮೇಲೆ ಬರಲು ಅವರೀಗ ಸಜ್ಜಾಗಿದ್ದಾರೆ. ಆ ಸಿನಿಮಾದ ಹೆಸರು 'ಧರಣಿ ಮಂಡಲ ಮಧ್ಯದೊಳಗೆ'.

ಅಂದರೆ ಈ ಸಿನಿಮಾದಲ್ಲಿ ಅವರ ಲವ್ಲೀ ಲುಕ್ ಮಿಸ್ ಆಗುತ್ತದೆಯೇ ಎಂದು ಚಡಪಡಿಸಬೇಕಿಲ್ಲ. ಇತ್ತೀಚೆಗಷ್ಟೇ ಬಿಡುಗಡೆಯಾದ ಸಿನಿಮಾದ ಲಿರಿಕಲ್ ಸಾಂಗ್ ನೋಡಿದರೆ ಈ ಪ್ರಶ್ನೆಗೆ ಉತ್ತರ ಸಿಗುತ್ತದೆ. ಈ ಸಿನಿಮಾದಲ್ಲಿಯೂ ಅವರು ಸಖತ್ ಗ್ಲ್ಯಾಮರಸ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಆ ಪಾತ್ರದ ನಡವಳಿಕೆ ಮಾತ್ರ ಇದುವರೆಗೆ ಅವರು ನಟಿಸಿದ ಪಾತ್ರಗಳಿಗಿಂತ ತುಂಬ ಬೇರೆ ರೀತಿಯದ್ದು. ಅದರ ಸೂಚನೆಗಳೂ ಆ ಲಿರಿಕಲ್ ಸಾಂಗ್‌ನಲ್ಲಿಯೇ ಸಿಗುತ್ತವೆ.

'ಧರಣಿ ಮಂಡಲ ಮಧ್ಯದೊಳಗೆ ಕ್ರೈಂ ಡ್ರಾಮಾ. ಒಂದು ಅಪರಾಧ ಕೃತ್ಯದ ಸುತ್ತಲೇ ಹೆಣೆದಿರುವ ಕಥೆ. ಅದರಲ್ಲಿ ನನ್ನದು ತುಂಬ ಬೋಲ್ಡ್ ಮತ್ತು ಅಷ್ಟೇ ಲೌವ್ಡ್ ಆಗಿರುವ ಹುಡುಗಿಯ ಪಾತ್ರ. ಯಾರಿಗೂ ಕೇರ್ ಮಾಡದಿರುವ ಹುಡುಗಿ. ಹದಿಹರೆಯದಲ್ಲಿಯೇ ಅವಳು ಹಲವು ಚಟಗಳಿಗೆ ದಾಸಳಾಗಿರುತ್ತಾಳೆ. ಈ ಪಾತ್ರದ ಲುಕ್ ಕುರಿತು, ಬಿಹೇವಿಯರ್ ಕುರಿತು ಸಾಕಷ್ಟು ತಲೆಕೆಡಿಸಿಕೊಂಡಿದ್ದೇವೆ. ಅದರ ಹೇರ್‌ಸ್ಟೈಲ್, ನೋಸ್ ರಿಂಗ್, ಕತ್ತಿನ ಹಾರ ಎಲ್ಲವೂ ಹೀಗೆಯೇ ಇರಬೇಕು ಎಂದು ಹುಡುಕಿ ತಂದಿದ್ದೇವೆ. ಈ ಚಿತ್ರದಲ್ಲಿ ಲವ್ ಸ್ಟೋರಿ ಇದೆ. ಆದರೆ ಥ್ರಿಲ್ಲಿಂಗ್ ಅಂಶಗಳೂ ಅಷ್ಟೇ ಇವೆ' ಎಂದು ಸಿನಿಮಾ ಬಗ್ಗೆ ವಿವರಣೆ ನೀಡುತ್ತಾರೆ ಅವರು.

ಈ ಸಿನಿಮಾದಲ್ಲಿ ಅವರು ನವೀನ್ ಅವರ ಜೊತೆಗೆ ತೆರೆಯನ್ನು ಹಂಚಿಕೊಂಡಿದ್ದಾರೆ. ಶ್ರೀಧರ್ ಷಣ್ಮುಖ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಈ ಪಾತ್ರದ ಕುರಿತು ನಿರ್ದೇಶಕರು ಹೇಳಿದಾಗಲೇ ಐಶಾನಿ ಅವರಿಗೆ ಥ್ರಿಲ್ ಆಯಿತಂತೆ. 'ನಿರ್ದೇಶಕರಿಗೆ ಈ ಪಾತ್ರವನ್ನು ನಾನು ಚೆನ್ನಾಗಿ ಮಾಡುತ್ತೇನೆ ಎಂಬ ನಂಬಿಕೆ ಇತ್ತು. ಆದರೆ ನನಗೇ ಕೊಂಚ ಆತಂಕ ಇತ್ತು. ಆದರೆ ಯಾವಾಗ ಕಾಸ್ಟ್ಯೂಮ್ ಹಾಕಿಕೊಂಡು ಕ್ಯಾಮೆರಾ ಎದುರಿಗೆ ನಿಂತೆನೋ, ಆಗ ಆ ಪಾತ್ರವೇ ಆಗಿ ನಟಿಸಿಬಿಟ್ಟೆ' ಎಂದು ಹೇಳಿಕೊಳ್ಳುತ್ತಾರೆ ಐಶಾನಿ.

ಈ ತಿಂಗಳ ಅಂತ್ಯದಲ್ಲಿ ಟ್ರೇಲರ್ ರಿಲೀಸ್ ಮಾಡಿ, ಜೂನ್‌ನಲ್ಲಿ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಪ್ರಯತ್ನಿಸುತ್ತಿದೆ.

ಐಶಾನಿ ಅಭಿನಯದ ಇನ್ನೊಂದು ಸಿನಿಮಾ 'ಹೊಂದಿಸಿ ಬರೆಯಿರಿ' ಕೂಡ ಚಿತ್ರೀಕರಣ ಮುಗಿಸಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ನಡೆಯುತ್ತಿವೆ. ಆಗಸ್ಟ್ ತಿಂಗಳಲ್ಲಿ ಆ ಸಿನಿಮಾವೂ ತೆರೆಗೆ ಬರಬಹುದು ಅನ್ನುತ್ತಾರೆ ಐಶಾನಿ. ■